cross of Dw1 OS 68-2020 dtd.11.08.2025.doc

ಓ.ಎಸ್‌ಃ **೬೮/೨೦೨೦**

ಡಿ. ಡಬ್ಲ್ಯೂ ಃ 01

<u>ಸಾಕ್ಷಿಗೆ ದಿನಾಂಕ **11.08.2025** ರಂದು ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>

ನಮ್ಮ ತಂದೆ-ತಾಯಿಯ ಮರಣಾನಂತರ ನಾವು ದಾವ ಸ್ವತ್ತನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ. ಯಾವ ವರ್ಷದಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ ನೆನಪಿರುವುದಿಲ್ಲ. ಸದರಿ ಮೌಖಿಕ ವಿಭಾಗಕ್ಕೆ ವಾದಿ ಮತ್ತು ಆಕೆಯ ಗಂಡ ಹಾಜರಿದ್ದರು, ಅವರ ಇಬ್ಬರು ಮಕ್ಕಳು ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿದ್ದು ಅವರಿಗೆ ನಾನು ನನ್ನ ತಂದೆ ಜೊತೆಯಲ್ಲಿದ್ದಾಗ ಅವರಿಗೆ ಮನೆ ಕಟ್ಟಿಸಿಕೊಟ್ಟಿದ್ದು ಅವರಿಗೆ ಎಲ್ಲಾ ರೀತಿ ಅನುಕೂಲ ಮಾಡಿಕೊಟ್ಟಿರುತ್ತೇವೆ. ಯಾವ ವರ್ಷದಲ್ಲಿ ವಾದಿಗೆ ಮನೆ ಕಟ್ಟಿಸಿಕೊಟ್ಟಿರುತ್ತೇವೆ ನೆನಪಿರುವುದಿಲ್ಲ, ನನ್ನ ಭಾವನ ಹೆಸರಿನಲ್ಲಿ ಮನೆ ಕಟ್ಟಿಸಿಕೊಟ್ಟಿರುತ್ತೇನೆ. ಈ ಬಗ್ಗೆ ನಾನು ನ್ಯಾ.ಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಮತ್ತು ನನ್ನ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತೇವೆ. ಸರ್ವೆ ನಂ.104 ರಲ್ಲಿ ಒಟ್ಟು 1 ಎಕರೆ 36 ಗುಂಟೆ ವಿಸ್ತೀರ್ಣ ಇದ್ದು ಮತ್ತೊಂದು ಸರ್ವೆ ನಂ.104/1 ಎ ಪೈ ಪಿ2 ರಲ್ಲಿ 1 ಎಕರೆ ಜಮೀನು ಇದ್ದು, ನಾನು, ಕೃಷ್ಣೇಗೌಡ, ಬಲರಾಮು ರವರು ತಲಾ 1 ಎಕರೆಯಂತೆ ವಿಭಾಗ ಮಾಡಿಕೊಂಡಿರುತ್ತೇನೆ. ಮೌಖಿಕ ವಿಭಾಗದಂತೆ ಖಾತೆ ವಗೈರೆ ನನಗೆ ಮತ್ತು ನನ್ನ ತಮ್ಮಂದಿರಿಗೆ ವರ್ಗಾವಣೆಯಾಗಿರುವುದಿಲ್ಲ, ನನ್ನ ಹೆಸರಿನಲ್ಲಿರುತ್ತದೆ.

ವಾದಿಗೆ ರೂ.50,000/- ಹಣ ಪಾವತಿಸಿರುವ ಬಗ್ಗೆ ನ್ಯಾ.ಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ವಾದಿಗೆ ಮನೆ ಕಟ್ಟುವ ಉದ್ದೇಶದಿಂದ ಕುಶಾಲ್ ನಗರದಿಂದ ರೋಜ್ ವುಡ್ ನ್ನು ಖರೀದಿಸಿ ನೀಡಿರುತ್ತೇನೆ. ನನ್ನ ಹೆಸರಿನಲ್ಲಿ ಖರೀದಿಸಿ ವಾದಿ ಮನೆ ನಿರ್ಮಾಣ ಮಾಡುತ್ತಿದ್ದ ಸ್ಥಳಕ್ಕೆ ತಂದಿರುತ್ತೇನೆ. ಮರದ ವಸ್ತುಗಳನ್ನು ವಾದಿಗೆ ನೀಡುತ್ತಿರುವುದರಿಂದ ಅವರ ಹೆಸರಿನಲ್ಲಿ

ರಶೀದಿ ಪಡೆಯಲು ತೊಂದರೆ ಇತ್ತು, ಕಾರಣ ವಾದಿ ಕುಶಾಲನಗರದಲ್ಲಿ ಮರಕೊಳ್ಳುವ ಸ್ಥಳಕ್ಕೆ ಬಂದಿರಲಿಲ್ಲ. ಆದ್ದರಿಂದ ನನ್ನ ಹೆಸರಿನಲ್ಲಿ ರಶೀದಿ ಹಾಕಿಸಿರುತ್ತೇನೆ. ನಾನು ವಾದಿಗೆ ಮನೆ ನಿರ್ಮಾಣ ಮಾಡಲು ಯಾವುದೇ ಮರಮುಟ್ಟನ್ನು ಖರೀದಿಸಿರುವುದಿಲ್ಲ ಹಾಗೂ ರೂ.50,000/- ಹಣವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.104 ರಲ್ಲಿ 9 ವರೆ ಗುಂಟೆ ರೈಲ್ವೆ ಇಲಾಖೆಗೆ ಸ್ವಾಧೀನಕ್ಕೆ ಬಿಟ್ಟು ಸದರಿ ಸ್ವತ್ತು ನನ್ನ ತಂದೆಯ ಸ್ವತ್ತು ಎಂದರೆ ಸರಿ. ಕಡತನಾಳು ಗ್ರಾಮದಲ್ಲಿರುವ ಈ ದಾವಾ ಐಟಂ ನಂ. 7 ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಮುಂದುವರೆದು ಸಾಕ್ಷಿ ನಾನು 13 ವರ್ಷಗಳ ಹಿಂದೆ  ಸದರಿ ಜಾಗದಲ್ಲಿ ಮನೆ ನಿರ್ಮಾಣ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 4 ಎಂ.ಆರ್ ವಹಿ ಪ್ರಕಾರ ಸರ್ವೆ ನಂ.104/1 ಎ ರಲ್ಲಿ 1 ಎಕರೆ ಸ್ವತ್ತು ಎಂ.ಆರ್ 12/1997-98 ರ ಆದೇಶಕ್ಕೆ ಪೂರ್ವದಲ್ಲಿ ಸದರಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಖಾತೆ ದಾಖಲು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ಬೀಳು ಎಂದು ಘೋಷಿಸಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದು, ನಂತರ ನಾನು ಅರ್ಜಿ ಸಲ್ಲಿಸಿ ಆರ್.ಆರ್.ಸಿ.ಆರ್ 1/1997-98 ದಿ.06.07.1997 ರಂದು ನನ್ನ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ 1 ರಂತೆ ಸರ್ವೆ ನಂ.104 ರಲ್ಲಿ ಒಟ್ಟು 77 ಗುಂಟೆ ನನ್ನ ತಂದೆ ದೊಡ್ಡೇಗೌಡ ಉರುಫ್ ಕೆಂಪೇಗೌಡರಿಗೆ ದಿ.30.12.1992 ರ ಆದೇಶದಂತೆ  ನನ್ನ ತಂದೆಯ ಹೆಸರಿಗೆ ಖಾತೆ ದಾಖಲು ಮಾಡಲು ತಹಶೀಲ್ದಾರ್ ರವರ ಆದೇಶ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ನೀಡಲಾಯಿತು.
ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ